ಪಿಡಬ್ಲ್ಯೂ1 ಓ.ಎಸ್.ನಂ.127/2018

ದಿನಾಂಕಃ 01-09-2021 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರಿದ ಪಾಟೀಸವಾಲುಃಶ್ರೀ ಹೆಚ್ ವಿ ವಕೀಲರಿಂದ

ನಮ್ಮ ಊರಿನಲ್ಲಿ ರಾಮಚಂದ್ರಪ್ಪ ಶಂಕರ್ ರೆಡ್ಡಿ ಪರಿಚಯ ಇದೆ. ರಾಮಚಂದ್ರಪ್ಪ ಮತ್ತು ನಾಗರಾಜಪ್ಪ ನಮ್ಮ ಊರಿಲ್ಲಿ ಯಾವುದೇ ಸಬ್ ರಿಜಿಸ್ಟ್ರಾರ್ ಕೆಲಸ ಇದ್ದರೆ ಇವರೇ ಮಾಡುತ್ತಾರೆ ಎಂದರೆ ಸರಿ. ಈ ಸಾಕ್ಷಿದಾರರು ಜಮೀನುಗಳನ್ನು ಅಡಮಾನ ಮಾಡಿಸುವುದು ಬಡ್ಡಿಗೆ ಹಣ ಕೊಡಿಸುವುದು ಮಾಡುತಾತರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಪಕ್ಕದಲ್ಲಿ ನನ್ನ ಜಮೀನು ಇದೆ ಎಂದರೆ ಸರಿ. ನನ್ನ ಜಮೀನಿನ ಪಕ್ಕದಲ್ಲಿ ಪ್ರತಿವಾದಿಗಳಿಗೆ ಸೇರಿದ ಜಮೀನು ಇದ್ದು ಆ ಜಮೀನುಗಳನ್ನು ಬರೆಸಿಕೊಳ್ಳಲು ಪ್ರತಿವಾದಿಗಳಿಗೆ ಬಡ್ಡಿಗಾಗಿ ಸಾಲದ ಹಣ ನೀಡಿ ಕ್ರಯದ ಕರಾರುಗಳನ್ನು ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಜಮೀನಿನ ವ್ಯಾಪಾರ ಆದಾಗ ದೊಡ್ಡಿಹಳ್ಳಿ ಸೀನಪ್ಪ ಚಿನ್ನಸಂದ್ರ ಆಂಜಪ್ಪ ಇದ್ದರು. ಎಷ್ಟು ಬೆಲೆಗೆ ನಿಗದಿಯಾಯಿತು. ಅದಕ್ಕೆ ಮುಂಗಡ ಹಣ ಕೊಟ್ಟಿದ್ದಿರಾ ಎಂದರೆ ಮುಂಗಡ ಹಣ ಕೊಟ್ಟಿರುವ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ಸರ್ಕಾರದಿಂದ ದರಕಾಸ್ತು ಮೂಲಕ ಮಂಜೂರಾಗಿದ್ದು ಪಿ ಟಿ ಸಿ ಎಲ್ ಕಾಯೆ ಉಲ್ಲಂಘನೆ ಮಾಡಿ ದಾವಾ ಸ್ವತ್ತನ್ನು ಕರಯಕ್ಕೆ ಪಡೆಯಲು ಬರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ಅಡಮಾನವಾಗಲೀ ಕ್ರಯವಾಗಲಿ ಅಥವಾ ಕ್ರಯದ ಕರಾರು ಪತ್ರ ಮಾಡುವಾಗ ಸರ್ಕಾರದ ಅನುಮತಿ ಪಡೆಯಬೇಕು ಎಂದರೆ ನನಗೆ ಗೊತ್ತಿಲ್ಲ. ಬಡ್ಡಿಯ ಭದ್ರತೆಗಾಗಿ ನಿಪಿ-1 ರ ಕ್ರಯದ ಕರಾರು ಪತ್ರ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ ಸುಳ್ಳು ದಾವೆ ಹಾಕಿ ಸುಳ್ಳುಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

(ಶ್ರೀ. ಶಿವಕುಮಾರ ಜಿ.ಜೆ)
ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ